ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರಿದ ಪಾಟೀ ಸವಾಲುಃ- ಶ್ರೀ.ಎಸ್.ವಿ. ವಕೀಲರಿಂದ ಆರೋಪಿಯ ಪರವಾಗಿ

12. ಯಾವುದೇ ವಸ್ತುವನ್ನು ಖರೀದಿ ಮಾಡಲು ಕೇಳಿದಾಗ ಸದರಿ ವಸ್ತುಗಳ ಬೆಲೆಯ ಬಗ್ಗೆ ಕೋಟೆಷನ್ ಕೇಳುತ್ತಾರೆ ಎಂದರೆ ಸರಿ. ನಮ್ಮ ಶಾಪ್ ನಲ್ಲಿಯೂ ಸಹಃ ಕೇಳಿದರೆ ಕೋಟೆಷನ್ ಕೊಡುವ ಕ್ರಮ ಇರುತ್ತದೆ. ನಿಪಿ 7 ರಲ್ಲಿ ಉಲ್ಲೇಖಿಸಿರುವ ಸಾಮಗ್ರಿಗಳನ್ನು ಆರೋಪಿಯು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯುನಿಯನ್ ಬ್ಯಾಂಕನಲ್ಲಿ ರೂ. 75,00,000/- ಓ.ಡಿ. ಸಾಲ ಮಾಡಿರುತ್ತೇನೆ. ಅದಲ್ಲದೇ ಬೇರೆ ಯಾವುದೇ ಸಂಸ್ಥೆಯಿಂದ ಸಾಲ ಪಡೆದಿರುವುದಿಲ್ಲ.

13. ನಾನು ಪಡೆದಿರುವ ಸಾಲಗಳಿಗೆ ಆರೋಪಿಯು ಜಾಮೀನುದಾರರಾಗಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಭದ್ರತೆಗಾಗಿ ಆರೋಪಿಯಿಂದ ಚೆಕ್ಕನ್ನು ಪಡೆದುಕೊಂಡಿದ್ದೇ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ದುರಪಯೋಗ ಮಾಡಿಕೊಂಡು ಒಂದು ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ನಿಪಿ 7 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಹಣಕಾಸು ಸಂಸ್ಥೆಗಳಿಂದ ನಾನು ಪಡೆದ ಸಾಲಗಳಿಂದ ರಕ್ಷಣೆ ಪಡೆಯಲು ಆರೋಪಿಯಿಂದ ಭದ್ರತೆಗಾಗಿ ಪಡೆದ ಚೆಕ್ಕನ್ನು ದುರುಪಯೋಗ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲು ಮಾಡಿರುವ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-

ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ